ಸೊಗಲದಲ್ಲಿ ಹಾಗೂ ಬೈಲಹೊಂಗಲ ತಾಲ್ಲೂಕಿನ ಬೈಲಾವಾಡವರ್ತಿಯಲ್ಲಿ ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಹೂ ತೋಟ ನಿರ್ಮಿಸಲು ಬೆಳಗಾಂ ಜಿಲ್ಲೆಯ ತೋಟಗಾರಿಕಾ ಉಪನಿರ್ದೇಶಕರು 5 ವರ್ಷಗಳಿಗೆ ಬೇಕಾಗುವ ಹಣ ರೂ. 13,54,000ಕ್ಕೆ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ಹಣ ಬಿಡುಗಡೆ ಮಾಡಿಕೊಡಲು ಮುಖ್ಯಕಾರ್ಯದರ್ಶಿಗಳು, ಜಿಲ್ಲಾ ಪರಿಷತ್ ಬೆಳಗಾಂರವರಿಗೆ ದಿನಾಂಕ 22-3-93ರಲ್ಲಿ ಪತ್ರ ಬರೆದು ಕೇಳಿಕೊಳ್ಳಲಾಗಿದೆ. ಆದರೆ ಈವರೆವಿಗೂ ಹಣ ಬಿಡುಗಡೆಯಾಗಿರುವುದಿಲ್ಲ. ಹಣ ಬಿಡುಗಡೆಯಾದ ಕೂಡಲೇ ಕೆಲಸ ಕಾರ್ಯಗತ ಗೊಳಿಸಲಾಗುವುದು.

ಊ) ಜಿಲ್ಲಾ ಪಂಚಾಯತ್ನಿಂದ ಇಲ್ಲಿಯವರೆವಿಗೂ ಹಣ ಬಿಡುಗಡೆಯಾಗಿರುವುದಿಲ್ಲ. ಹಣ ಬಿಡುಗಡೆಯಾದ ತಕ್ಷಣ ಕೆಲಸ ಕೈಗೆತ್ತಿಕೊಳ್ಳಲಾಗುವುದು.

ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ನಿವಾರಣೆ.

723 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗುಲ್ಬರ್ಗಾ ಜಿಲ್ಲೆಯ ಸೇಡಂ ರಾಜ್ಯದ ಚಿತ್ತಾಪುರ ತಾಲ್ಲೂಕಿನ ಸಂಕನೂರ, ರಾಜೋಳಾ, ದಂಡ ಗುಂಡ, ಪಣ್ಣಿಕೇರಾ, ಅಲ್ಲೂರ(ಬಿ) ಬೆಳಗೇರಾ ಗ್ರಾಮಗಳ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿ ನೀರು ಸರಬರಾಜು ಇಲ್ಲದೆ ನಾಲ್ಕು ವರ್ಷಗಳಿಂದ ತಪ್ಪು ಮಾಹಿತಿಗಳನ್ನು ನೀಡಿ ಕುಡಿಯುವ ನೀರಿಗಾಗಿ ಸಮಸ್ಯಾತ್ಮಕ ಗ್ರಾಮಗಳನ್ನಾಗಿ ಮಾಡಿದ್ದು ನಿಜವಲ್ಲವೆ?

2) ಸುಮಾರು 4ವರ್ಷಗಳಿಂದ ಪ್ರತಿ ವರ್ಷ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ದವರು ಮಾರ್ಚ್ ಒಳಗಾಗಿ ನೀರು ಸರಬರಾಜು ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದ್ದು ಪ್ರತಿ ಸಲ ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದು ಸಂಬಂಧಪಟ್ಟ ಮೇಲಧಿಕಾರಿಗಳು ಈ ಉತ್ತರವನ್ನು ಗಮನಿಸದೇ ಇರುವುದರಿಂದ ಅವ್ಯವಸ್ಥೆಯಾಗಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳೆಂದು ಮಾಡಿದ್ದು ನಿಜವಲ್ಲವೆ?

3) ಈಗಲಾದರೂ ಸಹ ಇದೇ ಮಾರ್ಚ್ ತಿಂಗಳ ಒಳಗಾಗಿ ಕುಡಿಯುವ ನೀರಿನ ಸರಬರಾಜು ಮಾಡಿ ಗ್ರಾಮಗಳ ನಾಗರೀಕರಿಗೆ ಕುಡಿಯುವ ನೀರಿನ ಸಮಸ್ಯೆ ನಿವಾರಿಸಬಹುದೇ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1) ಸಮಸ್ಯಾತ್ಮಕ ಗ್ರಾಮಗಳಾಗಿರುವುದು ನಿಜ.

2) ಈ ಎಲ್ಲಾ ಗ್ರಾಮಗಳಿಗೆ ನೀರಿನ ನೆಲೆಯು ಆಗಬಹುದೆಂದು ಊಹಿಸಿ ಕಾಮಗಾರಿಗಳನ್ನು ಮುಗಿಸಬಹುದೆಂದು ತಿಳಿಸಲಾಗಿತ್ತು. ಆದರೆ ನೀರಿನ ನೆಲೆಯು ಮೇಲಿಂದ ಮೇಲೆಗೆ ವಿಫಲವಾಗುತ್ತಾ ಬಂದಿರುವುದರಿಂದ ಯೋಜನೆಗಳನ್ನು ನಿಗದಿತ ಅವಧಿಯಲ್ಲಿ ಮುಗಿಸಲು ಸಾಧ್ಯವಾಗಲಿಲ್ಲ. ಆದುದರಿಂದ ಸದರೀ ಗ್ರಾಮಗಳು ಸಮಸ್ಯಾತ್ಮಕ ಗ್ರಾಮಗಳಾಗಿ ಉಳಿದಿವೆ.

3) ಈ ಆರು ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳ ಕೆಲಸಗಳ ಪ್ರಗತಿ ಕೆಳಗಿನಂತಿದೆ.

ಪಣ್ಣಿಕೇರಾ ಕೆಲಸ ಮುಗಿದು ಕಾರ್ಯಗತಗೊಳಿಸಲಾಗಿದೆ.

ದಂಡಗುಂಡ ಮತ್ತು

ರಾಜೋಳಾ : 30-4-94ರೊಳಗೆ ಮುಗಿಸಲಾಗುವುದು.

ಅಲ್ಲೂರ(ಬಿ) : ಮೇ 1994ರ ಅಂತ್ಯದೊಳಗೆ ಪೂರ್ತಿಗೊಳಿಸಲಾಗುವುದು.
ಬೆಳಗೇರಾ ಮತ್ತು
ಸಂಕನೂರ : ಜುಲೈ 1994ರ ಅಂತ್ಯದೊಳಗೆ ಪೂರ್ತಿಗೊಳಿಸಲಾಗುವುದು.

ರಾಜ್ಯದಲ್ಲಿ ಎಪಿಎಂಸಿ ಚುನಾವಣೆಗಳನ್ನು ನಡೆಸುವುದು

629 - ಶ್ರೀ ಶಿವಾನಂದ ಪೆಚ್ ಕೌಜಲಗಿ (ಬೈಲಹೊಂಗಲ): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಪಿಎಂಸಿ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು;

ಆ) ಎಪಿಎಂಸಿ ಚುನಾವಣೆಗಳನ್ನು ಬಹಳ ದಿನಗಳಿಂದ ನಡೆಸದೇ ಇರುವುದರಿಂದ ಎಪಿಎಂಸಿ ಆಡಳಿತ ಹದಗೆಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರದವರು ಎಪಿಎಂಸಿ ಚುನಾವಣೆಗಳನ್ನು ಕೂಡಲೇ ನಡೆಸಲು ಕ್ರಮಕೈಗೊಳ್ಳುವರೇ?

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು): ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಸುವ ಅವಧಿಯು ಮುಂಬರುವ ಸಾರ್ವತ್ರಿಕ ಚುನಾವಣೆಗಳು ನಡೆಯುವ ಅವಧಿಯ ಸಮೀಪ ಬರುವ ಹಿನ್ನೆಲೆಯಲ್ಲಿ ಸರ್ಕಾರವು ಸದರಿ ಸಮಿತಿಗಳಿಗೆ ಚುನಾವಣೆ ನಡೆಸಲು ಸಾಧ್ಯವಾಗಲಾರದೆಂದು ಅಭಿಪ್ರಾಯಪಟ್ಟಿದೆ.

ಆ) ಇಲ್ಲ

ಇ) (ಅ)ದಲ್ಲಿಯ ಉತ್ತರವು ಇದಕ್ಕೂ ಸಂಬಂಧಿಸಿದೆ.

ರೈತರು ಸಬ್ಸಿಡಿ ಸೌಲಭ್ಯದಿಂದ ವಂಚಿತರಾಗಿರುವ ಬಗ್ಗೆ

633 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಂಕಲ್ ಪ್ರಸ್ತಾವನೆಗಳು ಜಾರಿಗೆ ಬಂದಲ್ಲಿ ಕೃಷಿ ಕ್ಷೇತ್ರದ ಮೇಲೆ ತೀವ್ರತರ ಪರಿಣಾಮ ಬೀಳುವುದು ನಿಜವೇ?

ಆ) ರಾಜ್ಯದ ರೈತರು ಸಬ್ಸಿಡಿ ಸೌಲಭ್ಯಗಳಿಂದ ವಂಚಿತರಾಗುವುದು ನಿಜವೇ?

ಇ) ಈ ಡಂಕಲ್ ಪ್ರಸ್ತಾವನೆಯನ್ನು ವಿರೋಧಿಸಿ, ರಾಜ್ಯ ಸರ್ಕಾರ ಏನಾದರೂ ನಿರ್ಧಾರ ಕೈಗೊಂಡಿದೆಯೇ?

ಈ) ಇಲ್ಲದಿದ್ದಲ್ಲಿ ರೈತರಲ್ಲಿ ಉಂಟಾಗಿರುವ ತೊಂದರೆ ಹಾಗೂ ಭೀತಿಯ ವಾತಾವರಣವನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು): ಅ) ಭಾರತವು ತನ್ನ ಕೃಷಿ ನೀತಿ ಮತ್ತು ಕಾರ್ಯಕ್ರಮಗಳನ್ನು ಪಾಲಿಸಲು ಇರುವ ಸ್ವಾತಂತ್ರೀಯ ಮತ್ತು ಸಂಯಮವನ್ನು ಪ್ರತಿಕೂಲವಾಗಿ ಬಾಧಿಸುವ ಯಾವ ರೀತಿಯ ಅವಕಾಶವು ಡಂಕಲ್ ಪ್ರಸ್ತಾವನೆಯಲ್ಲಿ ಇರುವುದಿಲ್ಲ. ಆಹಾರ ಭದ್ರತೆ ಮತ್ತು ಆಹಾರ ನಿಧಿಯು ಸಂಪೂರ್ಣತೆ ಈ ವಿಷಯಗಳು ನಮಗೆ ಪ್ರಮುಖ ಆದ್ಯತೆಯಾಗಿರುತ್ತದೆ. ಈ ವಿಷಯಗಳಿಗೆ ಡಂಕಲ್ ಪ್ರಸ್ತಾವನೆಯಲ್ಲಿ ಮಾನ್ಯತೆ ನೀಡಲಾಗಿದೆ.

ಆ) ಇಲ್ಲಾ